ಆಣೆ-ಪ್ರಮಾಣಗಳನ್ನು ಜನ ನಡೆಸುತ್ತಾರೆ ಎಂದು ನಂಬುವಷ್ಟು ಮುಗ್ಧೆಯ ಬಗ್ಗೆ ನಿಜಕ್ಕೂ ಪ್ರೀತಿ ಹುಟ್ಟಿತ್ತು. 'ನಮ್ ಅಜ್ಜಯ್ನ ಅಜ್ಜಯ್ಯನ್ ಕಾಲದ ಮಾತು. ಅವನ್ ಹೆಸ್ರೂ ಬೊಮ್ಮಜ್ಜನೇಯ...' ಎನ್ನುತ್ತಾ ಬಂದು ಪಕ್ಕದಲ್ಲೇ ಕೂತಳು. ಹರಿಯುವ ನೀರಿನ ಸದ್ದಿನಲ್ಲಿ ಅವಳ ದನಿ ಪಿಸುಮಾತಿನಂತೆ ಕೇಳುತ್ತಿತ್ತು-

ಬೊಮ್ಮಜ್ಜನ ಹೆಂಡತಿ ಬೊಮ್ಮಿಗೆ ಹದಿನಾಲ್ಕು ಮಕ್ಕಳು. ಎಲ್ಲವನ್ನೂ ಹೆತ್ತಿದ್ದು ಅವಳೇ ಹೌದಾದರೂ ಅದರಲ್ಲಿ ಎಷ್ಟು ಬೊಮ್ಮಜ್ಜನ ಲೆಕ್ಕದ್ದು ಎಂಬುದು ಖಾತ್ರಿಯಿಲ್ಲ. ವಿಷಯವೇನೆಂದರೆ, ಊರಿನ ಒಂದೆರಡು ಹೆಗಡೇರ ಮನೆಗಳು ಪ್ರಬಲವಾಗಿದ್ದ ಕಾಲವದು. ಒಂದೊಂದು ಮನೆಯಲ್ಲೂ ಮೂವತ್ತು-ನಲವತ್ತು ಜನ. ಅದರಲ್ಲಿ ಹತ್ತಾರು ಗಂಡಸರು. ನಾಲ್ಕಾರು ಹೋರಿಗಳು. ಆ ಕುಟುಂಬಗಳ ಕೆಲವು ಗಂಡಸರ ಹೊರ ಚಾಳಿಯಿಂದಾಗಿ, ಆ ಮನೆಗಳಿಗೆ ಹೆಣ್ಣು ಕೊಡುವುದಕ್ಕೆ ಜನ ಹಿಂದುಮುಂದು ನೋಡುತ್ತಿದ್ದರಂತೆ. ಅಂಥ ಗಂಡುಗಳಿಗೆ ಕಣ್ಣಿಗೆ ಬೀಳುತ್ತಿದ್ದುದು ಕೆಳಗಿನ ಕೇರಿಯ ಹೆಂಗಸರು. ಹೆಚ್ಚಿನವರೆಲ್ಲಾ ಆ ಎರಡು ದೊಡ್ಡ ಮನೆಗಳ ಒಕ್ಕಲು. ಇನ್ನು ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಬೊಮ್ಮಿ ಹೆತ್ತಿದ್ದ ಹದಿನಾಲ್ಕರಲ್ಲಿ ಕೆಲವನ್ನು ಆ ಮನೆಗಳ ಲೆಕ್ಕಕ್ಕೂ ಹಾಕಬಹುದು. ಅದು ಬೊಮ್ಮಿಯ ಹಣೆಬರಹ ಮಾತ್ರವಲ್ಲ, ಕೇರಿಯ ಹಲವು ಹೆಂಗಸರದ್ದೂ ಆಗಿತ್ತು. ಹೈರಾಣಾಗಿ ತಂತಮ್ಮ ಗಂಡಸರಲ್ಲಿ ಹೇಳಿಕೊಂಡರೆ, ಬಡಿತ ಬಿಟ್ಟರೆ ಬೇರೆ ಸಾಂತ್ವನ ಸಿಗುತ್ತಿರಲಿಲ್ಲ. ಒಂದರ್ಥದಲ್ಲಿ ತಮ್ಮನೆಯ ಗಂಡಸರಿಂದಲೂ ರೋಸಿ ಹೋಗಿದ್ದರೇನೊ. ತಮ್ಮೆದುರಿಗೇ ತಮ್ಮ ಹೆಣ್ಣುಮಕ್ಕಳು ಈ ಸ್ಥಿತಿಗೆ ಬರುವುದನ್ನು ನೋಡಲಾಗದೆ ಒಂದಿಬ್ಬರು ತಾಯಂದಿರು ಹೊಳೆ ಹಾರಿದ್ದೂ ಇತ್ತಂತೆ. ಅವರು ಸತ್ತರೆ ಲೋಕವೇನು ನಿಲ್ಲುವುದಿಲ್ಲವಲ್ಲ.

ಇಂಥ ದಿನಗಳಲ್ಲೇ ಬಂಕಿಕೋಟೆಯತ್ತ ಬಂದಿದ್ದ ಅರಮನೆಯ ಪರಿವಾರ ಕುದುರೆ ಜಡ್ಡಿಯಲ್ಲಿ ಬೀಡು ಬಿಟ್ಟಿತ್ತು. ಹೊಳೆಬದಿಗೆ ಹೋಗಿದ್ದ ಬೊಮ್ಮಿಯ ಕಣ್ಣಿಗೆ ಬಿದ್ದಿದ್ದು ಅಕ್ಕಂಗಿ ಗುಂಡಿಯಲ್ಲಿ ಮೀಯುತ್ತಿದ್ದ ದೇವತೆಗಳಂತೆ ಕಾಂಬ ಹೆಂಗಸರು. ಅವರೆಲ್ಲಾ ಅರಮನೆಗೆ ಸೇರಿದವರಾದ್ದರಿಂದ ದೂರದಲ್ಲಿ ಪಹರೆಯೂ ಇತ್ತು. ಸೇನೆ ಬರುವುದು ಹೊಸದಲ್ಲದಿದ್ದರೂ, ಅವರೊಂದಿಗೆ ಹೀಗೆ ಹೆಂಗಸರು ಬರುವುದು ಅಪರೂಪವಾಗಿತ್ತು. ಆ ಕ್ಷಣಕ್ಕೆ ಇಂಥ ವ್ಯೂಹವನ್ನು ಬೊಮ್ಮಿ ಬೇಕೆಂದೇ ಹೆಣೆದಳೋ ಅಥವಾ ಅರಿಯದೇ ಅವಳಿಂದ ಆಗಿದ್ದೊ- ಹೇಳುವುದಕ್ಕೆ ಈಗ ಅವಳಿಲ್ಲ. ಥಟ್ಟನೆ ಹೆಗಡೇರ ಮನೆಗೆ ಹೋದವಳೇ- ಹೊಳೆಸಾಲಿನ ಮಾವಿನ ಮರಗಳಲ್ಲಿ ಮಿಡಿಗಾಯಿ ತೂಗಿ ತೊನೆಯುತ್ತಿದೆ. ಕುದುರೆಜಡ್ಡಿಯಲ್ಲಿ ಬೀಡು ಬಿಟ್ಟವರು ಏನನ್ನೂ ಉಳಿಸುವುದು ಅನುಮಾನ ಎಂಬ ಮಾಹಿತಿಯನ್ನು ಹೆಗಡತೀರಿಗೆ ಕೊಟ್ಟಳು. ಅಕ್ಕಂಗಿ ಗುಂಡಿಗೆ ಹೋಗುವುದು ಕಡಿಮೆಯೇ ಆಗಿದ್ದರಿಂದ ಅಲ್ಲಿನ ಸ್ಥಿತಿಗತಿಯ ಬಗ್ಗೆ ಯಾರಿಗೂ ಅಂದಾಜಿರಲಿಲ್ಲ. ಸೂರಪ್ಪನ ಮೇಲುಸ್ತುವಾರಿಯಲ್ಲಿ ಮಿಡಿಗಾಯಿ ತರುವಂತೆ ಬೊಮ್ಮನನ್ನು ಹೆಗಡತೀರು ಕಳಿಸಿದರು. ಅಕ್ಕಂಗಿ ಗುಂಡಿಗೆ ಅವರು ಹೋಗಿದ್ದು ಹೌದು, ಅಲ್ಲಿ ಯಾರನ್ನು ನೋಡಿದರೊ, ಏನನ್ನು ಮಾಡಿದರೋ- ಬೆನ್ನಟ್ಟಿದ ಸೈನಿಕರಿಂದ ತಪ್ಪಿಸಿಕೊಂಡು ಮನೆಯೊಳಗೆ ಬಂದು ಮುಸುಕಿಕ್ಕಿ ಮಲಗಿದವರು, ರಾತ್ರಿ ಬೆಳಗಾಗುವುದರೊಳಗೆ ನಾಪತ್ತೆಯಾಗಿದ್ದರು.

ಗುಂಡಿಯಲ್ಲಿ ಇದ್ದಿದ್ದು ಯಾರು, ಇವರು ನೋಡಿದ್ದು ಏನನ್ನು ಎಂಬ ಸತ್ಯ ಅರಿತಿದ್ದವಳು ಬೊಮ್ಮಿ ಮಾತ್ರ. ಉಳಿದವರ ಪಾಲಿಗೆ ದೇವತೆಗಳು ಇವರನ್ನು ಹಾರಿಸಿದರು ಮತ್ತು ಇನ್ಯಾರೇ ಇಲ್ಲಿಗೆ ಹೋದರೂ ಅವರ ಗತಿಯೂ ಅಷ್ಟೆ. ಅಂದಿನಿಂದ ಊರ ಗಂಡಸರು ಹೋಗುವುದಕ್ಕೆ ಹೆದರುವಂಥ ಜಾಗವಾಗಿ ಅದು ಪ್ರಖ್ಯಾತವಾಯಿತು. ಕೆಳಗಿನ ಕೇರಿಯ ಹೆಂಗಸರ ಪಾಲಿಗೆ ಅದು ಕ್ಷೇಮವಾದ ಅಡಗುದಾಣವಾಗಿ ಉಳಿಯಿತು. ನಾಲ್ಕು ತಲೆಮಾರುಗಳಿಂದಲೂ ಇದು ಹೀಗೆಯೇ ನಡೆದುಬಂದಿದೆಯಂತೆ... 'ಇವತ್ತಿಗೂ ಗಂಡಸ್ರು ಯಾರೂ ಬರೂದಿಲ್ಲ ಈ ಜಾಗಕ್ಕೆ. ನಾವ್ ಹೆಂಗಸ್ರು ಬರೂದ್ನ ಬಿಡೂದಿಲ್ಲ ಇಲ್ಲಿಗೆ' ಎನ್ನುತ್ತಾ ಹೊಳಪುಗಣ್ಣು ಬೀರಿದಳು ಲಲಿತೆ. 'ಬಡೂವ್ರ ಮನೆ ಹೆಂಗಸ್ರಂದ್ರೆ ಮೂರೂ ಬಿಟ್ಟವ್ರಲ್ಲ ಅಕ್ಕಾ! ಈ ಜಾಗೊಂದ್ ಇಲ್ಲದ್ರೆ, ನಮ್ ಬೊಮ್ಮಿಯೊಂದ್ ಹಾಂಗೆ ಮಾಡದ್ರೆ, ಇನ್ನೂ ಎಷ್ಟು ಹೆಂಗಸ್ರು ಹೊಳೆ ಹಾರ್ತಿದ್ರೇನ' ಎಂದವಳು ನೀರಿಗೆ ಕಲ್ಲೆಸೆದು ಅಲೆಯೆಬ್ಬಿಸುತ್ತಿದ್ದಳು.

ಅಕ್ಕಂಗಿ ಗುಂಡಿಯಲ್ಲಿ ಮೀಯದೆಯೆ ಅಲೆಯೆಬ್ಬಿಸುತ್ತಿದ್ದ ಆ ಪುಟ್ಟ ದೇವತೆಯನ್ನೇ ದಿಟ್ಟಿಸುತ್ತಾ ಕುಳಿತೆ. ●